# ಕರ್ನಾಟಕ ಸರ್ಕಾರ

(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

## ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ

ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009

ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37

ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org


ಸಂಖ್ಯೆ:ಕೆಆರ್‌ಐಡಿಎಲ್/ಆಡಳಿತ/ಅಧಿಕಾರಿಗಳ ಜೇಷ್ಠತಾ ಪಟ್ಟಿ/2018-19 ದಿನಾಂಕ 13-04-2018

### ಅಧಿಸೂಚನೆ

ವಿಷಯ: ಸಿವಿಲ್ ಅಪೀಲ್ ಸಂ.2368/2011- ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಅನುಷ್ಠಾನಗೊಳಸುವ ಬಗ್ಗೆ- ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವುದರ ಕುರಿತಂತೆ.

ಉಲ್ಲೇಖ:1) ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್‌ಆರ್‌ಆರ್ 2011 ಬೆಂಗಳೂರು ದಿನಾಂಕ 06-05-2017.

2) ಈ ಕಾರ್ಯಾಲಯದ ಅಧಿಸೂಚನೆ ಸಂ. ಕೆಆರ್‌ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 02-11-2017. (ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ)

3) ಈ ಕಾರ್ಯಾಲಯದ ಅಧಿಸೂಚನೆ ಸಂ.ಕೆಆರ್‌ಐಡಿಎಲ್/ಇಎಸ್‌ಟಿ/ಅ.ಅ./ ಅಂತಿಮ ಜೇಷ್ಠತಾ ಪಟ್ಟಿ/2017-18/16498 ದಿನಾಂಕ 21-12-2017. (ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ)

4) ಈ ಕಾರ್ಯಾಲಯದ ಅಧಿಸೂಚನೆ ಸಂ. ಕೆಆರ್‌ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 28-12-2017. (ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ)

5) ಸಂಸ್ಥೆಯಲ್ಲಿನ ಸೇವಾ ನಿರತ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಮೇಲಿನ ವೃಂದದ ಅಧಿಕಾರಿಗಳಿಂದ ಬಂದಿರುವ ಆಕ್ಷೇಪಣೆಗಳು.

6) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಸುತ್ತೋಲೆ ಸಂ.ಮುಕಾ/500/2018 ದಿನಾಂಕ 13-04-2018.

** ** ** ** **

ಸಿವಿಲ್ ಅಪೀಲ್ ಸಂ.2368/2011 - ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 09-02-2017 ರಂದು ನೀಡಿದ ತೀರ್ಪಿನಲ್ಲಿ Karnataka Determination of Seniority of the Government Servants Promoted on the basis of Reservation (to the posts in the Civil Services of the State) Act, 2002ರ ಸೆಕ್ಷನ್ 3 ಮತ್ತು 4 ಅನ್ನು "Ultra vires Articles 14 and 16 of the Constitution" ಎಂದು ಆದೇಶಸಿರುತ್ತದೆ ಹಾಗೂ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ನಿರ್ದೇಶನ ನೀಡಿರುತ್ತದೆ:

ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಉಲ್ಲೇಖ-(1) ರ ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್‌ಆರ್‌ಆರ್ 2011 ಬೆಂಗಳೂರು ದಿನಾಂಕ 06-05-2017 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿಕೊಂಡು ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ 09-02-2017ರ ಆದೇಶದ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಿನಾಂಕ 06-05-2017ರ ಮಾರ್ಗಸೂಚಿಗಳನ್ವಯ ಸಹಾಯಕ ಕಾರ್ಯಪಾಲಕ

. . . . .2

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org



ಅಭಿಯಂತರರು (ಗ್ರೇಡ್-1) ವೃಂದಕ್ಕೆ ಪೂರಕ ವೃಂದವಾಗಿರುವ (Feeder Cadre) ಸಹಾಯಕ ಇಂಜಿನಿಯರ್ ಗ್ರೇಡ್-1 ವೃಂದದಲ್ಲಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಂ.ಕೆಆರ್ಐಡಿಎಲ್/ಇಎಸ್‌ಟಿ/ಸಅ-ಗ್ರೇಡ್-1/ಸಿಆರ್-34/2013-14 ದಿನಾಂಕ 26-10-2017ರ ಮೂಲಕ ಜಾರಿ ಮಾಡಿರುವ ಜೇಷ್ಠತೆಯನ್ನು ಪರಿಗಣಿಸಿ ಅಧಿಸೂಚನೆ ಸಂ.ಕೆಆರ್ಐಡಿಎಲ್/ ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 02-11-2017 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡಿದೆ ಮತ್ತು 30 ದಿವಸಗಳೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ತದನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿ:28-12-2017 ರಂದು ಪ್ರಕಟಿಸಲಾಗಿರುತ್ತದೆ.

ಸಂಸ್ಥೆಯಲ್ಲಿನ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 27-12-2017ರ ಅಧಿಸೂಚನೆ ಮೂಲಕ ಪ್ರಕಟಣೆ ಮಾಡಿದ ಮೇಲೆಯೂ ಸಹ ಸಂಸ್ಥೆಯಲ್ಲಿನ ಹಲವಾರು ಸಹಾಯಕ ಅಭಿಯಂತರರು ಗ್ರೇಡ್-1, ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರುಗಳಿಂದ ಸಾಕಷ್ಟು ಆಕ್ಷೇಪಣೆಗಳು ಅಂತಿಮ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಈ ಕಾರ್ಯಾಲಯದಲ್ಲಿ ಸ್ವೀಕೃತಿಯಾಗಿರುತ್ತದೆ. ಸದರಿ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಜೇಷ್ಠತಾ ಪಟ್ಟಿಯನ್ನು ಉಲ್ಲೇಖ-(3) ರಲ್ಲಿ ಹೊರಡಿಸಿರುವ ದಿನಾಂಕ 27-04-1978 ರಿಂದ 13-06-2017 ರವರೆಗಿನ ಅವಧಿಯಲ್ಲಿ ಪದೋನ್ನತಿ ಹೊಂದಿ ಜೇಷ್ಠತೆಯಲ್ಲಿ ಸ್ಥಾನ ಪಡೆದಿರುವ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ಒಳಗೊಂಡಂತೆ ಪರಿಷ್ಕರಿಸಿ ಪದೋನ್ನತಿ ದಿನಾಂಕಗಳನ್ನು ಮರುನಿಗಧಿಪಡಿಸಿ, ಉಲ್ಲೇಖ-(4)ರ ಸರ್ಕಾರದ ಸುತ್ತೋಲೆ ಅನ್ವಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಉದ್ದೇಶಿಸಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಅಧಿಸೂಚನೆ ಸಂ.ಕೆಆರ್ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 28-12-2017 ರ ಮೂಲಕ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ ಮಾಡಿದ್ದಾಗ್ಯೂ, ಜೇಷ್ಠತಾ ಪಟ್ಟಿಗೆ ಬಂದಿರುವಂತಹ ಆಕ್ಷೇಪಣೆಗಳನ್ನು ಗಮನದಲ್ಲಿಟ್ಟುಕೊಂಡು, ಉಲ್ಲೇಖ-(3) ಮತ್ತು (4) ರ ಮೂಲಕ ಪ್ರಕಟಣೆ ಮಾಡಿರುವ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಿಂಪಡೆಯಲಾಗಿದೆ. ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿಗಳು ದಿನಾಂಕ 13-04-2018 ರಲ್ಲಿ ಜಾರಿ ಮಾಡಿರುವ ಸುತ್ತೋಲೆಯಲ್ಲಿನ ಅಂಶಗಳಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದಕ್ಕೆ ಪೂರಕ ವೃಂದವಾಗಿರುವ (Feeder Cadre) ಸಹಾಯಕ ಅಭಿಯಂತರರು ಗ್ರೇಡ್-1 ವೃಂದದ ಅಂತಿಮ ಜೇಷ್ಠತೆಯನ್ನು ಪರಿಗಣಿಸಿ ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ

.....3

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org



ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1 ವೃಂದದ ದಿನಾಂಕ 27-04-1978 ರಿಂದ 13-06-2017 ರವರೆಗಿನ ಅಧಿಕಾರಿಗಳ ಜೇಷ್ಠತೆಯನ್ನು ಪುನರಾವಲೋಕಿಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-1, ಕಾರ್ಯಪಾಲಕ ಅಭಿಯಂತರರು, ಅಧೀಕ್ಷಕ ಅಭಿಯಂತರರು ಮತ್ತು ಮುಖ್ಯ ಅಭಿಯಂತರರು ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧದಲ್ಲಿರುವಂತೆ ಈ ಮೂಲಕ ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಲಗತ್ತು**: ಸ.ಕಾ.ಅ. ಗ್ರೇಡ್-1 ಅನುಬಂಧ 'ಎ'
ಕಾ.ಅ. ಅನುಬಂಧ 'ಬಿ'
ಅ.ಅ. ಅನುಬಂಧ 'ಸಿ'
ಮು.ಅ. ಅನುಬಂಧ 'ಡಿ'

13/04/2018

**(ಡಾ.ಆರ್.ರಾಜು, ಭಾ.ಅ.ಸೇ.,)**
**ವ್ಯವಸ್ಥಾಪಕ ನಿರ್ದೇಶಕರು**
**ಕೆಆರ್‌ಐಡಿಎಲ್, ಬೆಂಗಳೂರು.**

**ಪ್ರತಿಯನ್ನು:**

- ಮುಖ್ಯ ಅಭಿಯಂತರರು (ದಕ್ಷಿಣ/ ಉತ್ತರ/ ಕೇಂದ್ರೀಯ), ಕೆಆರ್‌ಐಡಿಎಲ್, ಬೆಂಗಳೂರು.
- ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಕೆಆರ್‌ಐಡಿಎಲ್.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಐಟಿ), ಕೆಆರ್‌ಐಡಿಎಲ್, ಕೇಂದ್ರ ಕಛೇರಿ- ಇವರು ಈ ಅಧಿಸೂಚನೆಯನ್ನು ಅನುಬಂಧದೊಂದಿಗೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಮಾಡಲು ಆದೇಶಿಸಿದೆ.